# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ದೃಷ್ಟಿ

ಜಿ.ಟಿ. ನಾರಾಯಣ ರಾವ್

ಕನ್ನಡದ ಪ್ರಸಿದ್ಧ ವಿಜ್ಞಾನ ಲೇಖಕರು ಹಾಗೂ ಚಿಂತಕರಾದ ಶ್ರೀ ಜಿ. ಟಿ. ನಾರಾಯಣರಾವ್ ಭೌತಶಾಸ್ತ್ರ ಖಗೋಳಶಾಸ್ತ್ರ, ವಿಜ್ಞಾನಿಗಳ ಜೀವನ ಹಾಗೂ ವೈಜ್ಞಾನಿಕ ಮನೋಧರ್ಮಗಳ ಬಗೆಗೆ ಕನ್ನಡದಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶ ಯೋಜನೆಯಲ್ಲಿ ವಿಜ್ಞಾನ ಸಂಪಾದಕರಾಗಿದ್ದರು. ಜುಲೈ ೨೦೦೬ರಲ್ಲಿ ವಿವೇಕಾನಂದ ಪೀಠದ ವತಿಯಿಂದ ನಡೆದ 'ವಿವಿಧ ಜ್ಞಾನಶಾಖೆಗಳ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆಗಳು' ಎಂಬ ವಿಚಾರ ಸಂಕೀರ್ಣದಲ್ಲಿ ಅವರು ಮಂಡಿಸಿದ್ದ ಪ್ರಬಂಧ ಇದು.

## ಬದುಕು ಜಟಕಾ ಬಂಡಿಯ ನಾಲ್ಕು ಗಾಲಿಗಳು

ತಕ್ಕಡಿಯ ಒಂದು ತಟ್ಟೆಯಲ್ಲಿ ಸ್ವಾಮಿ ವಿವೇಕಾನಂದರ (೧೮೬೩-೧೯೦೨) ಸಮಗ್ರ ಕೃತಿಗಳನ್ನೂ ಇನ್ನೊಂದರಲ್ಲಿ ಆಲ್ಬರ್ಟ್ ಐನ್‌ಸ್ಟೈನ್‌ರ (೧೮೭೯-೧೯೫೫) ಜೀವನದೃಷ್ಟಿ ಕುರಿತ ಲೇಖನಗಳನ್ನೂ ಇಟ್ಟು ವಿಮರ್ಶಾತ್ಮಕವಾಗಿ ತುಲನಿಸಿದರೆ ಅವು ತಮ್ಮ ಅಂತಸ್ಸತ್ತ್ವಗಳಲ್ಲಿ ಸಮಾನವಾಗಿ ತೂಗುತ್ತವೆ. ಈ ಇಬ್ಬರು ಮಹಾಪುರುಷರೂ ತಮ್ಮ ನಡೆ, ನುಡಿ, ಬಗೆ ಮತ್ತು ಕೃತಿಗಳಿಂದ ಮನುಕುಲಕ್ಕೆ ಸದಾ ಪ್ರಸ್ತುತವಾಗುವ ಒಂದು ಆದರ್ಶವನ್ನು ಕಡೆದಿಟ್ಟಿರುವುದೇ ಇದರ ಕಾರಣ. ಅದು ಮಾನವೀಯತೆ, ನೈತಿಕತೆ, ವೈಚಾರಿಕತೆ ಮತ್ತು ವೈಜ್ಞಾನಿಕತೆ ಎಂಬ ಮಾನವಜನ್ಯ ಪ್ರಭಾವಗಳ ಮಧುರ ಮೇಳನ. (ಇಂಗ್ಲಿಷಿನಲ್ಲಿ ಇವು ಅನುಕ್ರಮವಾಗಿ humanism, ethics, rationalism and scientism.)

ಮಾನವೀಯತೆ ಎಂದರೆ ಜೀವಕಾರುಣ್ಯ, ಪ್ರೀತಿ ಅಥವಾ ದಯೆ. "ದಯೆಯೇ ಧರ್ಮದ ಮೂಲವಯ್ಯಾ"— ಇದು ಜೀವನನಾಣ್ಯದ ಒಂದು ಮಗ್ಗುಲು. ಇನ್ನೊಂದು ಮಗ್ಗುಲು ನೈತಿಕತೆ ಅಂದರೆ ವರ್ತನಸಂಹಿತೆ ಅಥವಾ ನೀತಿಯುತ ನಡವಳಿಕೆ. **ಪ್ರೀತಿಸೇಚಿತ ನೀತಿ ಮತ್ತು ನೀತಿನಿಯಂತ್ರಿತ ಪ್ರೀತಿ** ಈ ನಾಣ್ಯಕ್ಕೆ ಕ್ರಮವಾಗಿ ಚಲಾವಣೆಯನ್ನೂ ಅಧಿಕೃತತೆಯನ್ನೂ ನೀಡುವ ಪ್ರಮುಖ ಪ್ರಭಾವಗಳು. ವ್ಯಕ್ತಿಯ ಆಶೋತ್ತರಗಳು ಏನೇ ಇದ್ದರೂ ಅವುಗಳ ಈಡೇರಿಕೆಗೆ ಆತ ಪ್ರಾಮಾಣಿಕ ಪ್ರಯತ್ನ ಹೂಡುವುದು ಅಗತ್ಯ: "ಕಾಯಕವೆ ಕೈಲಾಸವಯ್ಯಾ" ಹೀಗೆ ಕಾಯಕನಿರತನಾಗಿರುವಾತನ ಅರಿವಿಗೆ ಪ್ರತಿಯೊಂದು ಘಟನೆಯ ತಳದಲ್ಲಿಯೂ ಕಾರ್ಯ-ಕಾರಣ ಸಂಬಂಧ ನಿಕಟವಾಗಿ ಹೆಣೆದುಕೊಂಡಿರುವುದು ಗೋಚರಿಸುತ್ತದೆ. ಇದನ್ನು ಗುರುತಿಸಿ ತದನುಸಾರ ಸ್ವಂತ ಜೀವನವನ್ನು ರೂಪಿಸಿಕೊಳ್ಳುವ ಮನೋಧರ್ಮವೇ ವೈಚಾರಿಕತೆ. ವ್ಯಕ್ತಿಯ ವೈಚಾರಿಕ ಮತಿ ನಿಸರ್ಗದ ಅಸಂಖ್ಯ ವಿದ್ಯಮಾನಗಳ ಜೊತೆ ವೀಕ್ಷಣೆ-ವಿಶ್ಲೇಷಣೆ-ಚಿಂತನೆ-ತಪಾಸಣೆ ಪಥದಲ್ಲಿ ಕ್ರಿಯಾಶೀಲವಾಗಿರುವಾಗ ಆತನಲ್ಲಿ ಮಿನುಗುವ ಅರಿವಿಗೆ ವಿಜ್ಞಾನವೆಂದು ಹೆಸರು. ನಿಸರ್ಗದ ಆಂತರಂಗಿಕ ಸಂಯಂತ್ರದ ಬಗೆಗಿನ ಒಳನೋಟ ಒದಗಿಸುವ ಪ್ರಬಲ ಮತ್ತು ಏಕೈಕ ಸೂಕ್ಷ್ಮದರ್ಶಕವಿದು. ಈ ಅನ್ವೇಷಣೆಯಲ್ಲಿ ವ್ಯಕ್ತಿ ಮಗ್ನನಾಗಿರುವಾಗ ಆತನ ಮನಸ್ಸು ತಳೆಯುವ ಸ್ಥಿತಿಯನ್ನು ವೈಜ್ಞಾನಿಕ ಮನೋಧರ್ಮ ಅಥವಾ ವೈಜ್ಞಾನಿಕತೆ (scientific temper or scientism) ಎನ್ನುತ್ತೇವೆ. ಇವು "ಬದುಕು ಜಟಕಾಬಂಡಿ"ಯ ನಾಲ್ಕು ಗಾಲಿಗಳು: ಇಲ್ಲಿ ಮಾನವೀಯತೆ ಮತ್ತು ನೈತಿಕತೆ ಮುಂಗಾಲಿಗಳು, ವೈಚಾರಿಕತೆ ಮತ್ತು ವೈಜ್ಞಾನಿಕತೆ ಹಿಂಗಾಲಿಗಳು. ಮುಂಗಾಲಿಗಳು ಮಾರ್ಗದರ್ಶಕಗಳು, ಹಿಂಗಾಲಿಗಳು ಚಲನಪ್ರೇರಕಗಳು, ಸವಾರ ಆಯಾ ವ್ಯಕ್ತಿ.

## ಧರ್ಮ-ವಿಜ್ಞಾನ ಅಂತರ ಸಂಬಂಧ

ಸೀಮಿತಾರ್ಥದಲ್ಲಿ ಧರ್ಮ ಎಂದರೆ religion. ಧರ್ಮ ಮತ್ತು ವಿಜ್ಞಾನಗಳ ಅವಿನಾ ಸಂಬಂಧವನ್ನು ಐನ್‌ಸ್ಟೈನ್ ತಮ್ಮ ಒಂದು ಸೂಕ್ತಿಯಲ್ಲಿ ಹಿಡಿದಿಟ್ಟಿದ್ದಾರೆ: "ಧರ್ಮರಹಿತ ವಿಜ್ಞಾನ ಕುಂಟು, ವಿಜ್ಞಾನರಹಿತ ಧರ್ಮ ಕುರುಡು." ಜ್ಞಾನಪರಿವ್ರಾಜಕನಾದ ವ್ಯಕ್ತಿಯ ಪುರೋಗಮನವನ್ನು ನಿರ್ದೇಶಿಸುವ ಬಾಹ್ಯ ಪ್ರಭಾವಗಳು ಎರಡು: ಗಮ್ಯ ಅಥವಾ ಗುರಿ, ಮಾರ್ಗ ಅಥವಾ ಪಥ. ಮೊದಲಿನದು ಅಮೂರ್ತ, ಎರಡನೆಯದು ಮೂರ್ತ. ಗಮ್ಯವಿರದೆ ಗಮನವಿಲ್ಲ. ಗಮನವಿರದೆ ಮಾರ್ಗವಿಲ್ಲ, ಮಾರ್ಗವಿಲ್ಲದೆ ಗಮ್ಯವೈದುವುದು ಅಸಾಧ್ಯ. ಧರ್ಮ ಗುರಿಯನ್ನು ಕಾಣಿಸುತ್ತದೆ, ವಿಜ್ಞಾನ ಅದರೆಡೆಗಿನ ಪಥವನ್ನು ರೂಪಿಸುತ್ತದೆ. ಹೀಗಿದೆ ಧರ್ಮ-ವಿಜ್ಞಾನಗಳ ನಡುವಿನ ನಿಕಟ ಅನ್ಯೋನ್ಯತೆ.

ಈ ನಿಟ್ಟಿನಲ್ಲಿ ಸ್ವಾಮೀಜಿಯವರ ಆದೇಶ ಖಚಿತವಾಗಿದೆ ಕೂಡ. ಸಾನ್ ಫ್ರಾನ್ಸಿಸ್ಕೋದಲ್ಲಿ ನೀಡಿದ (೧೮.೩.೧೯೦೦) 'ಜಗತ್ತಿಗೆ ಬುದ್ಧನ ಸಂದೇಶ' ಉಪನ್ಯಾಸದಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ: 'ಮನುಕುಲ ಐತಿಹಾಸಿಕವಾಗಿ ಕಂಡ ಅತ್ಯಂತ ಮಹತ್ತ್ವದ ಧಾರ್ಮಿಕಾಂದೋಲನ ಬುದ್ಧತ್ವ. ಬುದ್ಧಾಗಮನ ಪೂರ್ವದಲ್ಲಿಯ ಸಾಮಾಜಿಕ ಸ್ಥಿತಿಗತಿಗಳು ಹೇಗಿದ್ದುವು?

ಅರ್ಚಕರು ವಿಧಿಸಿದ್ದ ವಿಧಿನಿಷೇಧಗಳ ಹಿಡಿತದ ಪರಿಣಾಮವಾಗಿ ಶ್ವಾಸಬಂಧಕ ಪರಿಸ್ಥಿತಿ, ಸಾಮಾಜಿಕ ಕ್ಷೋಭೆ, ಸರ್ವತ್ರ ಅಶಾಂತಿ. (ಇದನ್ನು ಏಸುಕ್ರಿಸ್ತ ರಂಗಪ್ರವೇಶಿಸುವ ಮೊದಲು ಪ್ರಚಲಿತವಿದ್ದ ಯಹೂದ್ಯ ಸಮಾಜದ ಸ್ಥಿತಿಗತಿಗಳ ಜೊತೆ ಹೋಲಿಸಬಹುದು.) ಅಂಥ ದುರ್ಭರ ಸನ್ನಿವೇಶದಲ್ಲಿ ಗೌತಮ ಬುದ್ಧ ಬಂದ. ವಿಧಿನಿಷೇಧಗಳ ಉಕ್ಕಿನ ಹಿಡಿತದಿಂದ ಸಮಾಜವನ್ನು ಬಿಡಿಸಿ ಪ್ರೇಮಮಯ ಶಾಂತಿಮಂತ್ರ ಬೋಧಿಸಿದ ಮತ್ತು ಜನ ಅನುಸರಿಸಬೇಕಾದ ಕ್ರಮವನ್ನು ಸ್ವತಃ ಆಚರಿಸಿ ತೋರಿಸಿದ.''

ಸ್ವಾಮಿಜಿಯವರು 'ಪ್ರೇಮ ತ್ರಿಕೋಣ' ಎನ್ನುವ ಲೇಖನದಲ್ಲಿ ಹೇಳಿದ್ದನ್ನು ಗಮನಿಸಬೇಕು: "ಮೂರು ಕೋನಗಳಿಲ್ಲದೆ ತ್ರಿಕೋನಕ್ಕೆ ಹೇಗೋ ಹಾಗೆ ಮೂರು ವೈಲಕ್ಷಣ್ಯಗಳಿಲ್ಲದೆ ಪ್ರೇಮಕ್ಕೆ ಅಸ್ತಿತ್ವವಿಲ್ಲ. ಇವು ನಿರ್ಮೋಹ, ನಿಶ್ಶತ್ರು ಮತ್ತು ನಿರ್ಭಯ.'' ಇವುಗಳ ಅಂತರಾವಲಂಬನೆ ಹೇಗಿದೆ?

ಪ್ರೇಮತ್ರಿಕೋನಕ್ಕೆ ಶೃಂಗಗಳು ಮೂರಿಹವು:
ನಿರ್ಮೋಹ, ನಿಶ್ಶತ್ರು, ನಿರ್ಭಯಂ—ಪ್ರತಿಫಲದ
ಕಾಮನೆಯ ತೊರೆ, ಮೈತ್ರಿಯಂ ಮೆರೆ, ಸದಾ
ಧೀರ ಧೀಮಂತನಾಗಿರೆ ಮನದ ಕದವ ತೆರೆ.

### ಕಾರಣ ಮತ್ತು ಧರ್ಮ

ಈ ಹಿನ್ನೆಲೆಯಲ್ಲಿ ನಾವು ಸ್ವಾಮಿ ವಿವೇಕಾನಂದರ ಕೃತಿಗಳನ್ನು ಅವಲೋಕಿಸಿದರೆ ಅವರ ಮಾನಸಿಕ ಸಂರಚನೆ ಎಷ್ಟು ಅಗಾಧ ಮತ್ತು ಕ್ಲಿಷ್ಟ ಆದರೂ ಎಷ್ಟು ಸರಳ–ಸುಂದರ ಎಂಬುದನ್ನು ಕಂಡು ಬೆರಗಾಗುತ್ತೇವೆ. ಇಲ್ಲಿ ಕೇವಲ ಎರಡು ನಿದರ್ಶನಗಳನ್ನು ಆಯ್ದು ಈ ಅಂಶವನ್ನು ವಿವರಿಸಲು ಪ್ರಯತ್ನಿಸುತ್ತೇನೆ. ಅವರ ಸಮಗ್ರ ಕೃತಿಗಳನ್ನೂ ಇದೇ ದೃಷ್ಟಿಯಿಂದ ಪರೀಕ್ಷಿಸುವುದು ಒಂದು ಉದ್ದೀಪಕ ಬೌದ್ಧಿಕ ಯಾನ. 'ಯುಕ್ತಿ ಮತ್ತು ಧರ್ಮ' ಎಂಬ ಸ್ವಾಮಿ ವಿವೇಕಾನಂದರ ಉಪನ್ಯಾಸದ ಈ ಭಾಗ ಉಲ್ಲೇಖಯೋಗ್ಯ (ಕೃತಿಶ್ರೇಣಿ, ಸಂ.೬ ಪು. ೩೭೮):

"ನಾರದ ಋಷಿಗಳು ಪರಮ ಸತ್ಯವನ್ನು ತಿಳಿದುಕೊಳ್ಳಬೇಕೆಂದು ಸನತ್ಕುಮಾರ ಋಷಿಗಳ ಬಳಿಗೆ ಹೋದರು. ಸನತ್ಕುಮಾರರು ನಾರದರನ್ನು ಇದುವರೆಗೆ ನೀವು ಏನೇನು ಕಲಿತಿರುವಿರಿ ಎಂದು ಪ್ರಶ್ನಿಸಿದರು. ಅದಕ್ಕೆ ನಾರದರು, ತಾವು ಇದುವರೆಗೆ ವೇದ, ಜ್ಯೋತಿಷ; ಇವನ್ನು ಮತ್ತು ಇನ್ನೂ ಹಲವು ವೇದಾಂಗಗಳನ್ನು ಓದಿದ್ದರೂ ಮನಸ್ಸಿಗೆ ಶಾಂತಿಯಿಲ್ಲ ಎಂದರು. ಅನಂತರ ಅವರಿಬ್ಬರಿಗೂ ಸಂಭಾಷಣೆ ನಡೆಯಿತು. ಆಗ ಸನತ್ಕುಮಾರರು ವೇದ, ಜ್ಯೋತಿಷ ಮತ್ತು ಇತರ ತತ್ತ್ವಶಾಸ್ತ್ರಗಳೆಲ್ಲ ಗೌಣ, ವಿಜ್ಞಾನಶಾಸ್ತ್ರಗಳೆಲ್ಲವೂ ಗೌಣ, ಯಾವುದು ಬ್ರಹ್ಮಸಾಕ್ಷಾತ್ಕಾರಕ್ಕೆ ನಮಗೆ ಸಹಾಯ ಮಾಡುವುದೊ ಅದು ಮಾತ್ರ ಶ್ರೇಷ್ಠ ಮತ್ತು ಪರಜ್ಞಾನ ಎಂದರು. ನಮಗೆ ಈ ಭಾವನೆ ಎಲ್ಲಾ ಧರ್ಮಗಳಲ್ಲಿಯೂ ದೊರಕುವುದು. ಆದಕಾರಣವೆ ಧರ್ಮವನ್ನು ಪರಜ್ಞಾನವೆಂದು ಯಾವಾಗಲೂ ಕರೆಯುತ್ತಿದ್ದರು. ವಿಜ್ಞಾನಶಾಸ್ತ್ರದ ಮೂಲಕ ಬರುವ ಜ್ಞಾನ ನಮ್ಮ ಜೀವನದ ಯಾವುದೋ ಅಲ್ಪ ಭಾಗಕ್ಕೆ ಅನ್ವಯಿಸುವುದು. ಆದರೆ ಧರ್ಮ ನಮಗೆ ನೀಡುವ ಜ್ಞಾನ ಶಾಶ್ವತವಾದುದು, ಅದು ಬೋಧಿಸುವ ಸತ್ಯದಷ್ಟೇ ಅನಂತವಾದುದು. ತಮ್ಮದೇ ಶ್ರೇಷ್ಠ ಜ್ಞಾನವೆಂದು ಭಾವಿಸಿ ಧರ್ಮಗಳು ಅನೇಕ ವೇಳೆ ಲೌಕಿಕ ವಿದ್ಯೆಯನ್ನು ನಿಕೃಷ್ಟ ದೃಷ್ಟಿಯಿಂದ ನೋಡಿವೆ. ಇದು ಮಾತ್ರವಲ್ಲ. ಲೌಕಿಕ ಜ್ಞಾನದಿಂದ ಪ್ರಯೋಜನ ಪಡೆಯಲು ನಿರಾಕರಿಸಿವೆ. ಇದರ ಪರಿಣಾಮವಾಗಿ ಪ್ರಪಂಚದಲ್ಲೆಲ್ಲ ಲೌಕಿಕ ವಿದ್ಯೆಗೂ ಪಾರಮಾರ್ಥಿಕ ವಿದ್ಯೆಗೂ ಘರ್ಷಣೆಗಳಾಗಿವೆ. ಧರ್ಮವು, ನಿರ್ದೋಷವಾದ ಪ್ರಮಾಣವೇ ತನಗೆ ಮಾರ್ಗದರ್ಶಕ ಎಂದು, ಲೌಕಿಕ ವಿದ್ಯೆ ತನ್ನ ವಿಷಯದಲ್ಲಿ ಹೇಳುವುದನ್ನೆಲ್ಲಾ ನಿರಾಕರಿಸಿದೆ. ರಾರಾಜಿಸುತ್ತಿರುವ ಯುಕ್ತಿಯೆಂಬ ಮಹಾಶಸ್ತ್ರದಿಂದ ಸನ್ನದ್ಧವಾಗಿರುವ ವಿಜ್ಞಾನವಾದರೊ, ಧರ್ಮ ಹೇಳುವುದನ್ನೆಲ್ಲ ಖಂಡಿಸುವುದರಲ್ಲಿ ನಿರತವಾಗಿದೆ...

"ಈಗಿನ ಸಮಸ್ಯೆ ಏನೆಂದರೆ ಇದರಿಂದ ಪಾರಾಗುವುದಕ್ಕೆ ಮಾರ್ಗವಿದೆಯೆ ಎಂಬುದು. ಇದನ್ನು ಮತ್ತೂ ಸ್ಪಷ್ಟವಾಗಿ ಹೇಳಬೇಕಾದರೆ, ಇತರ ವಿಜ್ಞಾನಶಾಸ್ತ್ರಗಳು ಯುಕ್ತಿಯ ನವಾನ್ವೇಷಣೆಯ ಮೂಲಕ ಸಮರ್ಥಿಸಿಕೊಳ್ಳುವಂತೆ ಧರ್ಮವೂ ಅದರ ಮೂಲಕ ಸಮರ್ಥಿಸಲ್ಪಡಬೇಕೆ? ವಿಜ್ಞಾನದಲ್ಲಿ ಮತ್ತು ಇತರ ಬಾಹ್ಯಶಾಸ್ತ್ರಗಳಲ್ಲಿ ಉಪಯೋಗಿಸುವ ಪರಿಶೋಧನಾ ಮಾರ್ಗವನ್ನೇ ಧರ್ಮದಲ್ಲಿಯೂ ಉಪಯೋಗಿಸಬೇಕೆ? ನನ್ನ ದೃಷ್ಟಿಯಲ್ಲಿ ಇದು ಅಗತ್ಯ ಎನ್ನುತ್ತೇನೆ ಮತ್ತು ಇದನ್ನು ಎಷ್ಟು ಬೇಗ ಮಾಡಿದರೆ ಅಷ್ಟು ಒಳ್ಳೆಯದು. ಇಂತಹ ಪರಿಶೋಧನೆಯಿಂದ ಧರ್ಮ ನಾಶವಾಗುವಂತೆ ಇದ್ದರೆ, ಅದು ಇದುವರೆಗೂ ನಿಷ್ಪ್ರಯೋಜಕವಾಗಿತ್ತು; ಕೆಲಸಕ್ಕೆ ಬಾರದ ಒಂದು ಮೂಢನಂಬಿಕೆಯಾಗಿತ್ತು. ಇಂತಹ ಧರ್ಮ ಎಷ್ಟು ಬೇಗ ನಾಶವಾದರೆ ಅಷ್ಟು ಮೇಲು. ಇಂತಹ ಧರ್ಮ ನಾಶವಾಗುವುದೇ ಅತ್ಯುತ್ತಮವೆಂದು ನಾನು ನಿಸ್ಸಂದೇಹವಾಗಿ ಭಾವಿಸುತ್ತೇನೆ. ಇಂತಹ ಒಂದು ಶೋಧನೆಯಿಂದ ಅಯೋಗ್ಯವಾದುದೆಲ್ಲ ನಿಸ್ಸಂದೇಹವಾಗಿ ನಾಶವಾಗುವುದು ನಿಜ. ಆದರೆ ನಿಜವಾದ ಧರ್ಮದ ಸಾರ ಇಂತಹ ಅಗ್ನಿಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಅಪ್ರತಿಹತವಾಗಿ ನಿಲ್ಲುವುದು. ಧರ್ಮವು ವೈಜ್ಞಾನಿಕವಾಗುವುದು ಮಾತ್ರವಲ್ಲ, ಭೌತಶಾಸ್ತ್ರ, ರಸಾಯನ ಶಾಸ್ತ್ರಗಳ ನಿರ್ಣಯಗಳಷ್ಟು ವೈಜ್ಞಾನಿಕವಾಗುವುದು; ಆದರೆ ಅವಕ್ಕಿಂತ ಹೆಚ್ಚು ಶಕ್ತಿಯುತವಾಗಿರುವುದು. ಏಕೆಂದರೆ

## ಸಹಜಧರ್ಮ

ಮನುಷ್ಯನ ಸ್ವಭಾವದ ಸಹಜತೆಯ ಮೇಲೆ ಧರ್ಮದ ಪ್ರಮಾಣ ನಿಂತಿರುವುದು. ಅದು ಯಾವ ಶಾಸ್ತ್ರದ ಆಧಾರದ ಮೇಲೂ ನಿಂತಿಲ್ಲ. ಈ ಗ್ರಂಥಗಳು ಮಾನವನ ಸ್ವಭಾವದಿಂದ ನಿರ್ಮಿತವಾದವು, ಅವನಿಂದ ಹೊರಬಂದವು, ಅವನು ಇವನ್ನೆಲ್ಲಾ ಸೃಷ್ಟಿಸಿದನು. ಮನುಷ್ಯನನ್ನು ನಿರ್ಮಿಸಿದ ಶಾಸ್ತ್ರವನ್ನು ನಾವಿನ್ನೂ ಕಂಡಿಲ್ಲ. ಯುಕ್ತಿ ಕೂಡ ಮಾನವನ ಸ್ವಭಾವ ಎಂಬ ಮಾತು ಅದೇ ಕಾರಣದಿಂದಲೇ ಬಂದಿರುವುದು. ಯುಕ್ತಿಗೆ ಮಾತ್ರ ನಾವು ಮೊರೆ ಇಡಬಹುದು. ಮಾನವನ ಸ್ವಭಾವದೊಂದಿಗೆ ಯುಕ್ತಿ ಮಾತ್ರ ನೇರವಾಗಿ ಸಂಬಂಧಪಟ್ಟಿರುವುದರಿಂದ, ಎಲ್ಲಿಯವರೆಗೆ ಅದು ನಮ್ಮನ್ನು ಒಯ್ಯುವುದೋ, ಅಲ್ಲಿಯವರೆಗೆ ನಾವು ಅದನ್ನು ವಿಧೇಯರಾಗಿ ಅನುಸರಿಸಬೇಕು. —ಸ್ವಾಮಿ ವಿವೇಕಾನಂದ

ರಸಾಯನಶಾಸ್ತ್ರ ಭೌತಶಾಸ್ತ್ರಗಳಿಗೆ ಧರ್ಮಕ್ಕೆ ಇರುವಂತೆ, ಇದು ಸತ್ಯ ಎಂದು ಸಾರುವುದಕ್ಕೆ ಯಾವ ವಿಧವಾದ ಆಂತರಿಕ ಶಾಸನವೂ ಇಲ್ಲ."

ಸಾರಾಂಶವಿಷ್ಟು: ನಮ್ಮ ಅಧ್ಯಯನ ವಸ್ತು ಭೌತ ವಿಶ್ವವಾಗಿರಲಿ, ಭೌತಾತೀತ ಅಧ್ಯಾತ್ಮವಾಗಿರಲಿ ಅದರ ತಳದಲ್ಲಿರುವ ತತ್ತ್ವ ಒಂದೇ: ಕಾರ್ಯ–ಕಾರಣ ಸಂಬಂಧ. 'ಕಾರ್ಯ' ಪ್ರಕಟವಾಗಿರುವಾಗ ಅದರ ಹಿನ್ನೆಲೆ 'ಕಾರಣ'ದ ಅನ್ವೇಷಣೆ ವಿಜ್ಞಾನದ ವಿಧಾನವೆನ್ನಿಸುತ್ತದೆ. ಇನ್ನು 'ಕಾರಣ' ತಿಳಿದಿರುವಾಗ ಅಥವಾ ನಾವು ಊಹಿಸಿಕೊಂಡಾಗ ಅದರ ಪರಿಣಾಮವಾದ 'ಕಾರ್ಯ'ದ ಶೋಧ ಅಧ್ಯಾತ್ಮದ ಮಾರ್ಗವೆನ್ನಿಸುತ್ತದೆ. ಹೀಗೆ ವಿಜ್ಞಾನವೂ ಅಧ್ಯಾತ್ಮವೂ ನಿಕಟವಾಗಿ ಹೆಣೆದುಕೊಂಡಿರುವುದನ್ನು ಐನ್‌ಸ್ಟೈನ್ ಮತ್ತು ಸ್ವಾಮಿ ವಿವೇಕಾನಂದ ಇಬ್ಬರ ಕೃತಿಗಳಲ್ಲಿಯೂ ಮತ್ತೆ ಮತ್ತೆ ಕಾಣುತ್ತೇವೆ.

"ವಿಚಾರಮಾರ್ಗದಿಂದ ಸಮರ್ಥಿಸಲಾಗದ ಧರ್ಮವನ್ನು ನಿರಾಕರಿಸಬೇಕು" ಎಂದಿದ್ದಾರೆ ಸ್ವಾಮೀಜಿ. ಗ್ರಂಥ, ಪಂಥ ಅಥವಾ ಸಂತರನ್ನು ಆಧರಿಸಿ ಈ ತಾರ್ಕಿಕ ಮಾರ್ಗ ನಿಂತಿಲ್ಲ, ಕಾರ್ಯ–ಕಾರಣ ಮಾರ್ಗಾವಲಂಬಿಯಾಗಿದೆ ಎಂಬುದು ಇಂಗಿತ. ಅವರು ಪರಿಣಾಮಕಾರಿಯಾಗಿ ಪ್ರತಿಪಾದಿಸುವ ಸನಾತನ ಧರ್ಮ ವೇದಾವಲಂಬಿಯಲ್ಲ, ವಿಶಿಷ್ಟ ನಂಬಿಕೆಯನ್ನಾಗಲೀ ಅವತಾರಪುರುಷರನ್ನಾಗಲೀ ಆಧರಿಸಿ ಬೆಳೆದಿಲ್ಲ. ಬದಲು, ಆಂತರಿಕ ದಿವ್ಯತೆಯೆ ಅದರ ದೃಢ ಬುನಾದಿ ಎಂಬ ಸಂಗತಿಯನ್ನು ಅವರ ಕೃತಿಗಳಲ್ಲಿ ಮತ್ತೆ ಮತ್ತೆ ಕಾಣುತ್ತೇವೆ. ಸ್ವಾಮಿಜಿ ಪದೇ ಪದೇ ಉಲ್ಲೇಖಿಸುವ ಬುದ್ಧನ ಹೇಳಿಕೆಯನ್ನಿಲ್ಲಿ ಗಮನಿಸಬಹುದು: 'ನಂಬದಿರು ಏನನ್ನೂ—ಅದು ನಿನಗೆ ಹೇಳಲ್ಪಟ್ಟಿದೆ ಎಂಬ ಒಂದೇ ಕಾರಣಕ್ಕಾಗಿ, ಅಥವಾ ಅದು ಪಾರಂಪರಿಕ ಎಂಬ ಕಾರಣಕ್ಕಾಗಿ, ಅಥವಾ ನೀನೇ ನಿನ್ನಷ್ಟಕ್ಕೆ ಅದನ್ನು ಕಲ್ಪಿಸಿಕೊಂಡಿರುವೆ ಎಂಬ ಕಾರಣಕ್ಕಾಗಿ. ನಿನ್ನ ಉಪಾಧ್ಯಾಯ ನಿನಗೆ ಹೇಳುವುದನ್ನು ಆತನ ಬಗೆಗಿನ ಗೌರವ ಎಂಬ ಒಂದೇ ಕಾರಣಕ್ಕಾಗಿ ನಂಬದಿರು; ಬದಲು, ತೀಕ್ಷ್ಣ ಪರೀಕ್ಷೆ ಮತ್ತು ವಿಶ್ಲೇಷಣಾನಂತರ ಯಾವುದು ಸಮಸ್ತ ಜೀವಿಗಳ ಶ್ರೇಯೋಭಿವೃದ್ಧಿಗೆ ಕಾರಣವೋ ಆ ತತ್ತ್ವವನ್ನು ನಂಬು, ಅದಕ್ಕೆ ಶರಣಾಗು, ಮತ್ತು ಅದನ್ನು ನಿನ್ನ ಜೀವನ ಮಾರ್ಗದರ್ಶಿ ಎಂದು ಸ್ವೀಕರಿಸು." **(ಮುಂದುವರಿಯುವುದು)**


*Statement about ownership and other particulars about Viveka Prabha (according to Form IV Rule 8, circulated by Registrar of Newspapers for India).*

| | | |
|---|---|---|
| 1. | Place of Publication | Mysore 570 020 |
| 2. | Periodicity of Publication | Monthly |
| 3. | Printer's Name | J B Pattabhi |
| | Nationality | Indian |
| | Address | Pattabi Enterprises Ramavilasa Road Mysore |
| 4. | Publisher's Name | Swami Nityasthananda |
| | Nationality | Indian |
| | Address | President, Sri Ramakrishna Ashrama, Yadavagiri, Mysore 570 020 |
| 5. | Editor's Name | Swami Atmajnananda |
| | Nationality | Indian |
| | Address | Sri Ramakrishna Ashrama Yadavagiri Mysore 570 020 |
| 6. | Name & Addresses of the individuals who own the newspaper and partners or share-holders holding more than 1% of the capital | President, Sri Ramakrishna Ashrama, Yadavagiri Mysore 570 020 |

I, Swami Nityasthananda, hereby declare that the particulars given above are true to the best of my knowledge and belief.

Sd
*Swami Nityasthananda*
01.03.2007 Signature of the Publisher